# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 26.07.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಇಂದು ವಲಯ ಮಟ್ಟದ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳ ಪರಿಶೀಲನಾ ಸಭೆಯನ್ನು ನಡೆಸಿ, ಮಳೆಗಾಲದಲ್ಲಿ ಪ್ರವಾಹ ಉಂಟಾಗದಂತೆ ತಡೆಗಟ್ಟಲು ರಸ್ತೆ ಬದಿ ಮೋರಿಯಿಂದ ಹೂಳೆತ್ತುವ ಕಾರ್ಯ ತೀವ್ರಗತಿಯಲ್ಲಿ ಕೈಗೊಳ್ಳಲು ಮತ್ತು ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯವನ್ನು ಮುಂದುವರೆಸುವಂತೆ ವಲಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು.

ಈಗಾಗಲೇ ರಸ್ತೆಬದಿ ಮೋರಿಗಳಿಂದ ಹೂಳೆತ್ತುವ ಕಾರ್ಯ ನಿರ್ವಹಣೆಗಾಗಿ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾರ್ಯಾದೇಶ ನೀಡಲಾಗಿದೆ. ಕೆಲವು ವಾರ್ಡ್‌ಗಳಲ್ಲಿ ಕಾರ್ಯಾರಂಭವಾಗಿದೆ. ರಸ್ತೆಬದಿ ಮೋರಿಗಳಿಂದ ಹೂಳೆತ್ತಿದ ತಕ್ಷಣವೇ ಅದನ್ನು ಗುರುತುಪಡಿಸಿದ ಸ್ಥಳಗಳಿಗೆ ಸಾಗಿಸಬೇಕು ಮತ್ತು ಚಪ್ಪಡಿ ಕಲ್ಲುಗಳನ್ನು ಯತಾಸ್ಥಿತಿಯಲ್ಲಿ ಹಾಕುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ. ಆದ್ದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚನೆ ನೀಡಿ, ರಸ್ತೆ ಮೇಲೆ ಹೂಳನ್ನು ಹಾಕದಿರುವಂತೆ ಸೂಚನೆ ನೀಡಲು ಆಯುಕ್ತರು ತಿಳಿಸಿದರು.

ವಲಯ ಜಂಟಿ ಆಯುಕ್ತರು ಪ್ರತಿ ಒಂದೊಂದು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಭೇಟಿ ನೀಡಿ, ಮರಗಳನ್ನು ನೆಡಲು ವಾರ್ಡ್ ಮಟ್ಟದ ಕ್ರಿಯಾ ಯೋಜನೆ, ಮರಗಳ ಸುತ್ತಲು ಪಾತಿ ಕಟ್ಟುವ, ಮಳೆ ನೀರಿನ ಸಂಗ್ರಹಣೆ, ಶೋಲ್ಡರ್ ಡ್ರೈನ್ ಮೌತ್ ಸ್ವಚ್ಛಗೊಳಿಸುವ ಮತ್ತು ಹೂಳೆತ್ತುವ ಕಾರ್ಯ ಕುರಿತು ಪರಿಶೀಲನೆ ನಡೆಸಬೇಕು.

**ಸಾರ್ವಜನಿಕ ಸಂಪರ್ಕಾಧಿಕಾರಿ**